**ದಿನಾಂಕಃ 26.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ವಾದಿ ಪರ ಶ್ರೀ.ಕೆ.ಕೆ.ಎಸ್. ವಕೀಲರಿಂದಃ**

ಈ ಪ್ರಕರಣದಲ್ಲಿ ಸಲ್ಲಿಸಿದ ಪ್ರತಿವಾದ ಪತ್ರವನ್ನು ಊರಿನವರು ನನಗೆ ಹೇಳಿರುತ್ತಾರೆ, ಹಾಗೆ ನಾನು ಬರೆಯಿಸಿರುತ್ತೇನೆ. ವಾದಿಯ ತಂದೆಯು ಮೊದಲು ಕೂಲಿ ಕೆಲಸ ಮಾಡುತ್ತಿದ್ದರು. ಈಗ ಮಾಡುತ್ತಿಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾವು 10 ಜನ ಪ್ರತಿವಾದಿಗಳು ಹೇಳಿ ಪ್ರತಿವಾದ ಪತ್ರವನ್ನು ತಯಾರಿಸಿರುತ್ತೇವೆ. 1 ನೇ ಪ್ರತಿವಾದಿಯವರು ನಮ್ಮ ಗ್ರಾಮಸ್ಥರು ಹಾಗೂ ದೇವಸ್ಥಾನ ಸಮಿತಿಯ ಸದಸ್ಯರು. 1 ನೇ ಪ್ರತಿವಾದಿಯ ನನ್ನ ಕುಮ್ಮಕ್ಕಿನಿಂದ ದಾವಾ ಆಸ್ತಿಯನ್ನು ಅತಿಕ್ರಮಣ ಪ್ರವೇಶ ಮಾಡಲು ಪ್ರಯತ್ನಿಸಿರುತ್ತಾನೆ ಅಂದರೆ ಸುಳ್ಳು. ನಾವು ರಾಜಕೀಯವಾಗಿ, ಆರ್ಥಿಕವಾಗಿ ಬಲಾಢ್ಯರು ಅಂದರೆ ಸುಳ್ಳು. ದಾವಾ ಆಸ್ತಿಯ ವಿಚಾರವಾಗಿ 1 ನೇ ಪ್ರತಿವಾದಿಯವರ ವಿರುದ್ಧ ವಾದಿಯವರ ಮಗ ಒಂದು ದೂರನ್ನು ಸಲ್ಲಿಸಿರುತ್ತಾರೆ ಅಂದರೆ ಸುಳ್ಳು. ಈ ವಿಚಾರವಾಗಿ ಪೊಲೀಸರು ನಮ್ಮನ್ನು ಠಾಣೆಗೆ ಕರೆದಿರುತ್ತಾರೆ ಅಂದರೆ ಇಲ್ಲ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯವರು ಕೇವಿಯೇಟ್ ಪಿಟಿಷನ್ ದಾಖಲಿಸಿದ ಬಗ್ಗೆ ವಿಚಾರ ಗೊತ್ತಿದೆಯಾ ಅಂದರೆ ಸಾಕ್ಷಿಯು ಹೌದು ಎಂದು ಉತ್ತರಿಸುತ್ತಾರೆ. ಸದರಿ ಕೇವಿಯೇಟ್ ಪಿಟಿಷನ್ ನಲ್ಲಿ ದಾವಾ ಸ್ವತ್ತು ನಮಗೆ ಸೇರಿದೆ ಎಂದು ನಮೂದಿಸಿದ್ದು, ಅದಕ್ಕೆ ಸಂಬಂಧಿಸಿದಂತೆ ದಾಖಲೆ ಏನಾದರೂ ಇದೆಯಾ ಅಂದರೆ

ಸಾಕ್ಷಿಯು ಅದು ಸರ್ಕಾರಕ್ಕೆ ಸೇರಿದ ಜಮೀನು ಎಂದು ಉತ್ತರಿಸುತ್ತಾರೆ. ನಾವೆಲ್ಲ ಊರಿನ ಜನರು ವಾದಿಯವರಿಗೆ ಬಹಿಷ್ಕಾರ ಹಾಕಿರುತ್ತೇವೆ ಅಂದರೆ ಸುಳ್ಳು. ಪೋಲಿಸ್ ಠಾಣೆಯಲ್ಲಿ ಪೊಲೀಸ್ ಅಧಿಕಾರಿಗಳು ದಾವಾ ಆಸ್ತಿಯಲ್ಲಿ ವಾದಿ ಬೆಳೆದಿರುವ ಜೋಳವನ್ನು ಕಡೆಯಲು ತೊಂದರೆ ನೀಡಬಾರದು ಎಂದು ಬರವಣಿಗೆ ಮಾಡಿರುತ್ತಾರೆ ಅಂದರೆ ಸುಳ್ಳು. ದಾವಾ ಆಸ್ತಿಯಲ್ಲಿ ಈ ಹಿಂದೆ ಉಳುಮೆ ಯಾರು ಮಾಡುತ್ತಿದ್ದರು ಎಂದು ಕಾಣಿಸಲು ದಾಖಲೆ ಏನಾದರೂ ಹಾಜರುಪಡಿಸಿರುತ್ತಾರೆ ಅಂದರೆ ಸಾಕ್ಷಿಯು ಅದು ಸರ್ಕಾರದ ಜಮೀನಾಗಿದ್ದು, ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಯು ವಾದಿಯ ಅನುಭೋಗದಲ್ಲಿದೆ ಅಂದರೆ ಸುಳ್ಳು. ವಾದಿಯು ದಿಃ06.01.1976 ರಲ್ಲಿ ದರಕಾಸ್ತ ಅರ್ಜಿ ಸಲ್ಲಿಸಿ ಅವರಿಗೆ ದಿಃ 31.07.1976 ರಲ್ಲಿ ಮಂಜೂರು ಆಗಿರುತ್ತದೆ ಅಂದರೆ ಸುಳ್ಳು. ದಾವಾ ಆಸ್ತಿಯನ್ನು ಕೆಲವು ಷರತ್ತುಗಳನ್ನು ನಮೂದಿಸಿ ವಾದಿಗೆ ಮಂಜೂರು ಮಾಡಿರುತ್ತಾರೆ ಅಂದರೆ ಸುಳ್ಳು. ದಾವಾ ಆಸ್ತಿಗೆ ಸಂಬಂಧಿಸಿದಂತೆ ಮಾನ್ಯ ತಹಸೀಲ್ದಾರ್ ರವರು ನಕ್ಷೆಯನ್ನು ತಯಾರಿಸಿ ಮಂಜೂರು ಮಾಡಿರುತ್ತಾರೆ ಅಂದರೆ ಸುಳ್ಳು. ಸ.ನಂ.48 ರಲ್ಲಿ ಒಟ್ಟು ವಿಸ್ತೀರ್ಣ 20 ಎಕರೆ ಚಿಲ್ಲರೆ ಇದ್ದು, ಅದರಲ್ಲಿ ಭಾಗ್ಯಮ್ಮ ರವರಿಗೆ 3 ಎಕರೆ, ಉಳ್ಳಮ್ಮ ರವರಿಗೆ 2 ಎಕರೆ, ವಾದಿಯ ಮಗ ಜಯರಾಮ ರವರಿಗೆ 2 ಎಕರೆ ಜಮೀನು ಮಂಜೂರು ಆಗಿರುತ್ತದೆ. ಉಳಿದ ಸ್ವತ್ತು ಸರ್ಕಾರದ ಸ್ವತ್ತಾಗಿರುತ್ತದೆ. ದಾವಾ ಸ್ವತ್ತಿನಲ್ಲಿ ನನಗೆ ಏನಾದರೂ ಹಕ್ಕು ಇದೆ ಅಂದರೆ

ಸಾಕ್ಷಿಯು ಅದು ಸರ್ಕಾರದ ಸ್ವತ್ತು ಎಂದು ಉತ್ತರಿಸುತ್ತಾರೆ. ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಿದ ಅರ್ಜಿಯ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಅಂದರೆ ಇಲ್ಲ. ವಾದಿಗೆ ಮಂಜೂರಾದ 4 ಎಕರೆ ಜಮೀನಿನಿಂದ ಓಡಿಸುವ ಉದ್ದೇಶದಿಂದ ಅವರಿಗೆ ಅಡ್ಡಿ ಆತಂಕಪಡಿಸುತ್ತಿದ್ದೀರಿ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ದೇವಸ್ಥಾನದ ಜಮೀನು ಇದೆ ಎಂದು ಕಾಣಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಅಂದರೆ ಇಲ್ಲ. ವಾದಿಯು ದಾವಾ ಆಸ್ತಿಯಲ್ಲಿ ಅನುಭೋಗದಲ್ಲಿದ್ದು, ಸಾಗುವಳಿ ಮಾಡುತ್ತಿದ್ದಾರೆ ಅಂದರೆ ಸುಳ್ಳು. ಸಾಕ್ಷಿಯು ಮುಂದುವರೆದು ಸದರಿ ಆಸ್ತಿಯಲ್ಲಿ ನಾಡಕಛೇರಿ ಕಟ್ಟಿರುತ್ತಾರೆ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಯಲ್ಲಿ ನಾಡಕಛೇರಿ ಇದೆ ಎಂದು ಕಾಣಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಅಂದರೆ ಸಾಕ್ಷಿಯು ಪಹಣಿ ಪತ್ರಿಕೆಯಲ್ಲಿ ಇದೆ ಎಂದು ಉತ್ತರಿಸುತ್ತಾರೆ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**